**ಕರ್ನಾಟಕ ಸರ್ಕಾರ**
**ಸಮಗ್ರ ಮಕ್ಕಳ ರಕ್ಷಣಾ ಯೋಜನೆ**

ಸಂ.ಕೆಎಸ್ಐಸಿಪಿಎಸ್/ಕೋವಿಡ್-19/46/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:22.04.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಕೋವಿಡ್-19 ಹಿನ್ನೆಲೆಯಲ್ಲಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳ ಹಾಗೂ ಯೋಜನೆಯ ಯಾವುದೇ ಅಧಿಕಾರಿ, ಸಿಬ್ಬಂದಿಗಳ ಕ್ವಾರಂಟೈನ್/ಐಸೋಲೇಷನ್ ವಿವರ ಹಾಗೂ ಕೋವಿಡ್-19 ಸ್ಯಾಂಪಲ್ಸ್ ವಿವರಗಳನ್ನು ಪಡೆಯುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಕಛೇರಿಯಿಂದ ಈಗಾಗಲೇ ಕೋವಿಡ್-19ಗೆ ಸಂಬಂಧಪಟ್ಟಂತೆ ಹಲವಾರು ಸುತ್ತೋಲೆಗಳನ್ನು ನೀಡಲಾಗಿದೆ. ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳ ಕನ್ನಡ ಭಾಷಾಂತರ ಪ್ರತಿಯನ್ನು ಹಾಗೂ ಆದೇಶದ ಸಾರಾಂಶವನ್ನು ಸಹ ಪ್ರತ್ಯೇಕವಾಗಿ ಅನುಪಾಲಿಸಲು ನೀಡಲಾಗಿದೆ. ಅಲ್ಲದೇ ದಿನಾಂಕ:14.04.2020ರ ಕೇಂದ್ರ ಕಚೇರಿಯ ಪತ್ರದನ್ವಯ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿನ ಮಕ್ಕಳ ಆರೋಗ್ಯದಲ್ಲಿ ಯಾವುದೇ ಏರುಪೇರುಗಳಿದ್ದಲ್ಲಿ ಕೂಡಲೇ ಮಾಹಿತಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಗಮನಕ್ಕೆ ತರುವುದು ಹಾಗೂ ಪ್ರಧಾನ ಕಛೇರಿಗೂ ಮಾಹತಿ ನೀಡುವಂತೆ ಈಗಾಗಲೇ ಸೂಚಿಸಿದ್ದಾಗ್ಯೂ ಈ ವಿಷಯದಲ್ಲಿ ಕೆಲವು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಉದಾಸೀನತೆ ಮತ್ತು ನಿರ್ಲಕ್ಷ್ಯ ಧೋರಣೆಯಿಂದ ವರ್ತಿಸುತ್ತಿರುವುದು ಕೇಂದ್ರ ಕಛೇರಿಯ ಗಮನಕ್ಕೆ ಬಂದಿದ್ದು, ಇದನ್ನು ಅತೀ ಗಂಭೀರವಾಗಿ ಪರಿಗಣಿಸಲಾಗಿದೆ.

ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳ ಹಾಗೂ ಯೋಜನೆಯ ಯಾವುದೇ ಅಧಿಕಾರಿ, ಸಿಬ್ಬಂದಿಗಳ ಕ್ವಾರಂಟೈನ್/ಐಸೋಲೇಷನ್ ಬಗ್ಗೆ ಹಾಗೂ ನಮೂನೆಗಳನ್ನು(ಸ್ಯಾಂಪಲ್ಸ್) ಕೋವಿಡ್-19 ಪರೀಕ್ಷೆಗೆ ಕಳುಹಿಸಿದರ ಬಗ್ಗೆ ಮತ್ತು ಬಂದ ಫಲಿತಾಂಶದ ವರದಿಯ ಬಗ್ಗೆ ಈ ರೀತಿ ಕೋವಿಡ್-19ಗೆ ಸಂಬಂಧಪಟ್ಟ ಸಮಸ್ತ ತುರ್ತು ಮಾಹಿತಿಯನ್ನು ಈ ಕೆಳಗಿನಂತೆ ಒದಗಿಸುವುದು.

1) ನಿರ್ದೇಶಕರು ಹಾಗೂ ಯೋಜನಾ ನಿರ್ದೇಶಕರಿಗೆ ದೂರವಾಣಿ ಮೂಲಕ ತಕ್ಷಣ ಸಮಗ್ರ ಮಾಹಿತಿ ಒದಗಿಸುವುದು.
2) ವಿವರವಾದ ಲಿಖಿತ ವರದಿಯನ್ನು ಅಂದೇ ಕೇಂದ್ರ ಕಛೇರಿಗೆ ಸಲ್ಲಿಸುವುದು.
3) ಈ ಬಗ್ಗೆ ಪತ್ರಕ್ಕೆ ಲಗತ್ತಿಸಿದ ನಮೂನೆಯನ್ನು ಗೂಗಲ್ ಡ್ರೈವ್‌ನಲ್ಲಿ ಹಾಕಲಾಗಿದ್ದು, ಅದರಲ್ಲಿ ಮಾಹಿತಿಯನ್ನು ಆ ಕೂಡಲೇ ಅಪ್‌ಡೇಟ್ ಮಾಡತಕ್ಕದ್ದು.

REDMI NOTE 8
AI QUAD CAMERA

ಪ್ರಧಾನ ಕಛೇರಿಯಲ್ಲಿ ಕು. ಯಲ್ಲಮ್ಮ, ಸಂಶೋಧನಾಧಿಕಾರಿ, ಪ್ರಧಾನ ಕಚೇರಿ, ಬೆಂಗಳೂರು ಇವರು ದಿನನಿತ್ಯ ಈ ಬಗ್ಗೆ ಗಮನಹರಿಸಿ ಈ ರೀತಿ ಯಾವುದೇ ವರದಿ ಬಂದಲ್ಲಿ ಅದನ್ನು ಹಾಗೂ ಗೂಗಲ್ ಡ್ರೈವ್‌ನ ನಮೂನೆ ಮಾಹಿತಿಯನ್ನು ತಕ್ಷಣ ಯೋಜನಾ ನಿರ್ದೇಶಕರು ಹಾಗೂ ನಿರ್ದೇಶಕರ ಗಮನಕ್ಕೆ ತರತಕ್ಕದ್ದು ಹಾಗೂ ಈ ಪತ್ರಕ್ಕೆ ಲಗತ್ತಿಸಿದ ನಮೂನೆಯಲ್ಲಿ ಈ ರೀತಿ ಬಂದ ದಿನನಿತ್ಯದ ವರದಿಗಳನ್ನು ವಾರಕ್ಕೊಮ್ಮೆ ಕ್ರೋಢೀಕರಿಸಿ ಯೋಜನಾ ನಿರ್ದೇಶಕರು ಮತ್ತು ನಿರ್ದೇಶಕರ ಗಮನಕ್ಕೆ ತರತಕ್ಕದ್ದು.

ಕೋವಿಡ್-19ಗೆ ಸಂಬಂಧಪಟ್ಟ ಯಾವುದೇ ಆರೋಗ್ಯದ ವಿಚಾರವನ್ನು ಮಕ್ಕಳ ವಿಷಯದಲ್ಲಾಗಲೀ ಅಥವಾ ಅಧಿಕಾರಿ ಸಿಬ್ಬಂದಿಗಳ ವಿಷಯದಲ್ಲಾಗಲೀ ರಿಯಲ್ ಟೈಮ್‌ನಲ್ಲಿ(ಲೈವ್ ಅಪ್‌ಡೇಟ್) ಮಾಹಿತಿಯನ್ನು ಕೇಂದ್ರ ಕಛೇರಿಗೆ ಯೋಜನಾ ನಿರ್ದೇಶಕರು ಮತ್ತು ನಿರ್ದೇಶಕರಿಗೆ ತಲುಪಿಸತಕ್ಕದ್ದು. ಈ ವಿಷಯದಲ್ಲಿ ಯಾವುದೇ ಉದಾಸೀನತೆ ಅಥವಾ ನಿರ್ಲಕ್ಷ್ಯ ಧೋರಣೆಯನ್ನು ತೋರಿಸಿದಲ್ಲಿ ಸಂಬಂಧಪಟ್ಟವರ ವಿರುದ್ಧ ಕಠಿಣ ಶಿಸ್ತುಕ್ರಮ ಕೈಗೊಳ್ಳಲಾಗುವುದು.

ತಮ್ಮ ವಿಶ್ವಾಸಿ,

23.04.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

REDMI NOTE 8
AI QUAD CAMERA